ಬೇಕಾಗಿಲ್ಲ. ಈ ರೀತಿ ಇರುವುದರಿಂದ ಅವರು ಕೇಳಿದರೆ ಖಂಡಿತವಾಗಿಯೂ ಹೊರಗಡೆ ಹೋಗುತ್ತಾರೆ. ಆದ್ದರಿಂದ ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಪತ್ರವ್ಯವಹಾರ ಮಾಡಿ, ಈ ಮಿಲಿಟರಿ ಇನ್‌ಸ್ಟಲೇಶನುಗಳನ್ನು ಹೊರಗಡೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇಪೆರ್ಸಾ ಕಾರ್ಪೊರೇಶನ್ ಲಿಮಿಟ್‌ನಲ್ಲಿ ಇದ್ದರೆ, ಕಾರ್ಪೊರೇಷನಿನವರು ಸರ್ಕಾರಕ್ಕೆ ಬರೆದಾಗ ಆದರ ಬಗ್ಗೆ ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾನು ಸಲಹೆ ಮಾಡುವುದು, ಬೆಂಗಳೂರು ಕಾರ್ಪೊರೇಷನಿನವರು ಇದರ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮುಖ್ಯಮಂತ್ರಿಯವರು ಹೇಳಿದರು, ಕಾರ್ಪೊರೇಷನ್ ಲಿಮಿಟಿನಲ್ಲರುವ ಮಿಲಿಟರಿ ಇನ್‌ಸ್ಟಲೇಶನುಗಳನ್ನು ಹೊರಗಡೆ ವರ್ಗಾಯಿಸುವುದರ ಬಗ್ಗೆ ಕೆಲವಕ್ಕೆ ಅವರು ಒಪ್ಪಿದ್ದಾರೆ, ಕೆಲವಕ್ಕೆ ಒಪ್ಪಿಲ್ಲವೆಂದು ಹೇಳಿದ್ದಾರೆ. ಅವರು ಯಾವುದಕ್ಕೆ ಒಪ್ಪಿದ್ದಾರೆ, ಯಾವುದಕ್ಕೆ ಒಪ್ಪಿಲ್ಲವೆಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರು ಎರಡು ಜಾಗಗಳ ಬಗ್ಗೆ ಒಪ್ಪಿದ್ದಾರೆ. ಒಂದನೆಯದು ಕಾರ್ನರ್ ಹೌಸ್ ಬೌಂಡೆಡ್ ಬೈ ಕ್ವೀನ್ಸ್ ರೋಡ್, ಮಹಾತ್ಮಾ ಗಾಂಧಿ ರೋಡ್, ಸೈಂಟ್ ಮಾರ್ಕ್ಸ್ ರೋಡ್ ಮತ್ತು ಕಬ್ಬನ್ ರೋಡ್. ಆ ಮೇಲೆ ಇನ್ನೊಂದು ಈಗ ಇರುವ ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟ್ಯಾಬ್ಲಿಷ್‌ಮೆಂಟ್ ಶಿಫ್ಟ್ ಮಾಡುವುದಕ್ಕೆ ಒಪ್ಪಿದ್ದಾರೆ.

Planting of Road Side Trees

692. Sri P. M. BANGI (Jamkhandi).—

Will the Minister for Agriculture and Forests be pleased to state :—

(*a*) the number of pits dug for planting road-side trees on major District Roads, State and National High-ways during 1972-73 of the State (Talukwise information may be furnished) ;

(*b*) the total cost incurred by Government for digging these pits ;

(*c*) the rate fixed for digging and forming each pit ;

(*d*) the number of pits in which avenue trees are planted, rearred and grown ?

Sri K. H. PATIL (Minister for Agriculture and Forests).—

(*a*) 1,56,872 pits. Please see statement appended.

(*b*) Rs. 8,18,034.

(*c*) The rate for digging and forming each pit inclusive of the protective trench mound alround varies from Rs. 3.78 to Rs. 5.99 depending upon the type of the soil. The total cost including earthwork, sowing on trench mound, planting including cost on transporting of 5 seedlings, and weeding charges varies from Rs. 4.14 to Rs. 6.35.

(SRI K. H. PATIL)

(*d*) 6,336 during 1972-73.

STATEMENT

The Talukwise figures regarding the number of pits etc., are not available as the accounts are maintained in the Ranges with reference to the Range and not Taluk as a Unit. The figures are hence furnished according to jurisdiction of Forest Divisions.

	Divisions	No. of Pits	Cost incurred
	Under Normal Budget Head		
		Rs.	Rs. Ps.
1	Extension Forestry Programme and afforestation Division, Mandya (Covering Mysore, Mandya, Bangalore and Kolar Districts).	7,139	30,444-56
2	Extension Forestry Programme and afforestation Division, Gulbarga, (Covers Gulbarga, Bidar and Raichur Districts).	18,000	1,08,000-00
3	Hassan (Hassan District) Division.	1,000	4,132-50
4	Chitradurga Division (Chitradurga District).	2,028	7,966-00
5	Bellary Division (Bellary District)	2,860	19,425-10
6	Bagalkot Division (Bijapur District)	2,800	17,489-75
7	Belgaum Division (Parts of Belgaum District).	120	484-00
		33,947	1,87,941-91
	(Under 64—Famine Relief)		
	Gulbarga, Raichur and Bidar Districts	1,22,925	6,30,092-00
	Total (1972-73)	1,56,872	8,18,034-00

ಶ್ರೀ ಪಿ. ಎಂ. ಬಂಗಿ.—ಒಂದು ಲ್ 56 ಸಾವಿರದ 872 ಗುಂಡಿಗಳನ್ನು ತೋಡಿಸಿದ್ದೀರಿ ಎಂದು ಹೇಳಿದ್ದೀರಿ. ಉಳಿದ 6 ಸಾವಿರ ಗುಂಡಿಗಳಲ್ಲಿ ಏಕೆ ಗಿಡಗಳನ್ನು ನೆಟ್ಟಿಲ್ಲ? ಮತ್ತು ಹೀಗೆ ನೆಡದೆ ಇದ್ದುದರಿಂದ ಗುಂಡಿಗಳ ಮಣ್ಣು ಬದ್ದು ಹಾಳಾಗಿ ಹೋಗಿವೆ. ಕೆಲವು ಗುಂಡಿಗಳಲ್ಲಿ ಗಿಡಗಳು ಬರೆಯೇ ಇಲ್ಲ.

† ಶ್ರೀ ಕೆ. ಎಚ್. ಪಾಟೀಲ್.—ಗಿಡಗಳನ್ನು ನೆಡುತ್ತಾರೆ. ಎಲ್ಲ ಗಿಡಗಳು ಹುಟ್ಟುವುದಿಲ್ಲವೋ ಅಲ್ಲಿ ಪುನಃ ನೆಡಬೇಕಾಗುತ್ತದೆ.

ಶ್ರೀ ಪಿ. ಎಂ. ಬಂಗಿ.—ಉಳಿದ ಗುಂಡಿಗಳಲ್ಲಿ ಏಕೆ ಗಿಡಗಳನ್ನು ಹಾಕಿಲ್ಲ ?

ಶ್ರೀ ಕೆ. ಎಚ್. ಪಾಟೀಲ್.—ಬೇಸಿಗೆ ಕಾಲದಲ್ಲಿ ಗುಂಡಿಗಳನ್ನು ತೆಗೆಯುತ್ತಾರೆ ; ಮಳೆಗಾಲದಲ್ಲಿ ಗಿಡಗಳನ್ನು ನೆಡುತ್ತಾರೆ.

ಶ್ರೀ ಹಂಪಿ ಶಿವಣ್ಣ.—ಎಲ್ಲಾ ಕಡೆಗಳಲ್ಲಿಯೂ ಸಸಿಗಳನ್ನು ಹಾಕದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಎಚ್. ಪಾಟೀಲ್.—ಅದನ್ನು ಮಳೆ ಇರುವಾಗ ಹಾಕಬೇಕಾಗುತ್ತದೆ. ಬೇಸಿಗೆ ಕಾಲದಲ್ಲಿ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಒಂದು ಗುಂಡಿ ತೆಗೆಯುವುದಕ್ಕೆ 6 ರೂಪಾಯಿ ಚಿಲ್ಲರೆ ಖರ್ಚಾಗುತ್ತದೆ. ಇದರಿಂದ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ರಸ್ತೆ ಪಕ್ಕದಲ್ಲರ ತಕ್ಕಂತಹ ಹಿಡುವಳಿದಾರರು ಏನಿದ್ದಾರೆ ಅವರಿಗೆ ಇಂಥ ಕಡೆಗಳಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ವಹಿಸಿದರೆ ಸರ್ಕಾರಕ್ಕೂ ವೆಚ್ಚ ತಪ್ಪುತ್ತದೆ ಮತ್ತು ಅವರು ಅದನ್ನು ಗಾರ್ಡ್ ಮಾಡಿ ಬೆಳೆಸುವುದಕ್ಕೂ ಅನುಕೂಲವಾಗುತ್ತದೆ. ಆದ್ದರಿಂದ ರಸ್ತೆಯ ಪಕ್ಕದಲ್ಲರತಕ್ಕಂತಹ ಹಿಡುವಳಿದಾರರು ಯಾರು ಇದ್ದಾರೆ, ಅವರಿಗೆ ಇದರ ಜವಾಬ್ದಾರಿಯನ್ನು ವಹಿಸುತ್ತೀರಾ ?

1-30 P.M.

ಶ್ರೀ ಕೆ. ಎಚ್. ಪಾಟೀಲ್.—ಅವರು ತಂತಮ್ಮ ಜಮೀನುಗಳಲ್ಲಿ ಮರಗಳನ್ನು ಹಾಕಿಕೊಂಡರೆ ಸರ್ಕಾರಕ್ಕೆ ಬಹಳ ಸಂತೋಷವಾಗುತ್ತದೆ. ರಸ್ತೆಗಳಲ್ಲಿ ನೇರವಾಗಿ ಅಳತೆಮಾಡಿ ಅವುಗಳನ್ನು ಹಾಕಬೇಕಾಗಿರುವುದರಿಂದ, ಅವುಗಳನ್ನು ರಸ್ತೆಗಳ ಇಕ್ಕೆಲಗಳಲ್ಲಿ ಸಿಕ್ಕಾಪಟ್ಟೆ ಕೊಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರವೇ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಜೆ. ವೆಂಕಟಪ್ಪ.—ಸರ್ಕಾರದವರು ಕೊಟ್ಟಿರತಕ್ಕ ಆದೇಶದ ಪ್ರಕಾರ ಹಾಗೂ ಅಧಿಕಾರಿಗಳು ಹೇಳಿದ ಪ್ರಕಾರ ಗುಳಿಗಳನ್ನು ತೆಗೆಯಬೇಕು. ಕೆಲವು ಕಡೆಗಳಲ್ಲಿ ಆದೇಶವನ್ನು ಕೊಟ್ಟಿದ್ದರೂ ಅದನ್ನು ತೆಗೆದುಹಾಕಿ ಗುಳಿಗಳನ್ನು ಮಾಡಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಕಡೆಗಳಲ್ಲಿ ಆ ರೀತಿ ಗುಂಡಿ ತೆಗೆದಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅಂತಹವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಜೆ. ವೆಂಕಟಪ್ಪ.—ಈ ಗುಂಡಿಗಳನ್ನು ಇರಾಖೆಯ ಮೂಲಕ ತೆಗೆಸಿದ್ದೀರೋ ಅಥವಾ ಜೆಂಡರ್ ಕರೆದು ಅನಂತರ ರೇಟ್ ಫಿಕ್ಸ್ ಮಾಡಿದ್ದೀರೋ ?

ಶ್ರೀ ಕೆ. ಎಚ್. ಪಾಟೀಲ್.—ಇರಾಖೆಯ ಮುಖಾಂತರ.

ಶ್ರೀ ಎಸ್. ಬಂಗಾರಪ್ಪ.—ಈ ಸಸಿಗಳನ್ನು ಮಳೆಗಾಲ ಬರುವಾಗ ಹಾಕಬೇಕೆಂಬುದು ಒಳ್ಳೆಯ ಸಲಹೆ. ಈಗ ಮುಂದೆ ಬರತಕ್ಕ ಮಳೆಗಾಲದಲ್ಲಿ ಸಂಪೂರ್ಣವಾಗಿ ರಾಜ್ಯದಲ್ಲಿರತಕ್ಕ ಎಲ್ಲಾ ರಸ್ತೆಗಳ ಇಕ್ಕೆಲಗಳಲ್ಲಿ ವಿಶೇಷವಾಗಿ ಸಸಿಗಳನ್ನು ಹಾಕುವ ಕಾರ್ಯವನ್ನು ಪೂರ್ಣಗೊಳಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನನ್ನ ಇಚ್ಛೆಯೂ ಅದೇ.

Sorab Taluk Land Grant Consultative Committee

741. **Sri S. BANGARAPPA** (Sorab).—

Will the Minister for Revenue be pleased to state :—

(*a*) whether it has come to the notice of the Government that in the Land Consultative Committees constituted in all the Taluks of the State many R-Congressmen are included ;